O.S. No.284/2022 P.W. 1 Dated :10-06-2024.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ.ಕೆ.ಕೆ.ಟಿ. ವಕೀಲರಿಂದಃ-

ಪ್ರತಿವಾದಿಗಳು ತೊಂದರೆ ನೀಡಿದ ಕಾರಣ ದಾವೆ ಹೂಡಿರುತ್ತೇನೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯಪತ್ರವನ್ನು ನಾನು ಹಾಜರುಪಡಿಸಿರುವುದಿಲ್ಲ . ಯಾವ ವರ್ಷದಲ್ಲಿ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ಪ್ರತಿವಾದಿ ನನ್ನ ತಮ್ಮ. ನಾನು ಹಾಗೂ ಪ್ರತಿವಾದಿ ಒಟ್ಟು ಕುಟುಂಬದಲ್ಲಿದ್ದಾಗ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತೇನೆ. ಸ.ನಂ 3 ರಲ್ಲಿ ಒಟ್ಟು 29 ಗುಂಟೆ ಜಮೀನು ಇದೆ. ಸ.ನಂ. 3/1 ರಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಹದಿಮೂರು ಮುಕ್ಕಾಲು ಗುಂಟೆ ಜಮೀನು ಇದೆ. ಸ.ನಂ.3/1 ರಲ್ಲಿ 07 ಗುಂಟೆ ಜಮೀನಿನಲ್ಲಿ ನಾನು ಕ್ರಯಕ್ಕೆ ಖರೀದಿ ಮಾಡಿದಾಗ ಉಳಿಕೆ ಜಮೀನನ್ನು ನನ್ನ ತಂದೆ ಖರೀದಿಸಿದರು. 2003 ಕ್ಕೂ ಮೊದಲು ಸ.ನಂ.3 ರಲ್ಲಿನ ನನ್ನ ಕುಟುಂಬಕ್ಕೆ ಸೇರಿದ ಹದಿಮೂರು ಮುಕ್ಕಾಲು ಗುಂಟೆ ಜಮೀನನ್ನು ನಮ್ಮ ಕುಟುಂಬದವರೆಲ್ಲರೂ ಒಟ್ಟಾಗಿ ಸಾಗುವಳಿ ಮಾಡುತ್ತಿದ್ದೆವು ಎಂದರೆ ಸರಿ . ಆ ಜಮೀನಿನ ಸುತ್ತಲೂ ಸಹಾ ಬೇಲಿ ನಿರ್ಮಿಸಿಕೊಂಡಿರುತ್ತೇವೆ ಎಂದರೆ ಸರಿ . ಹದಿಮೂರು ಮುಕ್ಕಾಲು ಗುಂಟೆ ಜಮೀನಿನಲ್ಲಿ ನನ್ನ ತಂದೆ ಮನೆ ನಿರ್ಮಿಸಿಕೊಂಡಿದ್ದರು , ಅದು ಹಳೆಯದಾದ ಕಾರಣ ಅದನ್ನು ಕೆಡವಿಹಾಕಿ ಅದೇ ಜಾಗದಲ್ಲಿ ನಾನು ಮನೆ ನಿರ್ಮಿಸಿಕೊಂಡಿರುತ್ತೇನೆ. ಹದಿಮೂರು ಮುಕ್ಕಾಲು ಗುಂಟೆ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ಮನೆ ನಿರ್ಮಿಸಿಕೊಂಡಿರುತ್ತೇನೆ. ಆ ಮನೆಯಲ್ಲಿ ನಾನು ವಾಸವಾಗಿದ್ದು , ಸ್ವಾಧೀನಾನುಭವದಲ್ಲಿರುತ್ತೇನೆ ಎಂದರೆ ಸರಿ . ಮನೆಯ ಸುತ್ತಮುತ್ತಲಿನ ಜಾಗವೂ ಸಹಾ ನನ್ನ ಸ್ವಾಧೀನದಲ್ಲಿಯೇ ಇದೆ ಎಂದರೆ ಸರಿ . ನನ್ನ ತಮ್ಮ ಪ್ರತಿವಾದಿಯ ಹಿಸ್ಸೆಗೆ ಹೋದಂತಹ ಜಮೀನಿನಲ್ಲಿ ಅವರು ಮನೆ ನಿರ್ಮಿಸಿಕೊಂಡು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ . ಅವರು ಮನೆಯ ಸುತ್ತಮುತ್ತ ತೆಂಗಿನ ಮರಗಳನ್ನು ಬೆಳೆಸಿ ಸುತ್ತಲಿನ ಜಾಗದ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ .

2003 ನೇ ಇಸವಿಯಲ್ಲಿ ಆದಂತಹ ಪಂಚಾಯಿತಿ ಪಾಲುಪಾರೀಕತ್ತು ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ . ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಸದರಿ ಪಂಚಾಯಿತಿ ಪಾಲುಪಾರೀಕತ್ತಿನಂತೆ ನನಗೆ ಸ.ನಂ.3 ರಲ್ಲಿ ಆರೂಮುಕ್ಕಾಲು ಗುಂಟೆ ಬಂದಿರುತ್ತದೆ ಎಂದರೆ ಸರಿ . ಪ್ರತಿವಾದಿಯ ಹಿಸ್ಸೆಗೆ 07 ಗುಂಟೆ ಬಂದಿತ್ತು ಎಂದರೆ ಸರಿ . ಆ ರೀತಿ ನಾವು ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ,

ಸಾಕ್ಷಿಯು ಮುಂದುವರಿದು ನ್ಯಾಯಾಲಯದ ಆದೇಶದಂತೆ ನನಗೆ 07 ಗುಂಟೆ , ಪ್ರತಿವಾದಿಗೆ ಆರೂಮುಕ್ಕಾಲು ಗುಂಟೆಯಂತೆ ನ್ಯಾಯಾಲಯದಲ್ಲಿ ರಾಜಿ ಡಿಕ್ರಿಯ ಆದೇಶ ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ರಾಜಿ ಅರ್ಜಿಯಲ್ಲಿ ನಿಮ್ಮ ಹೆಸರಿಗೆ 07 ಗುಂಟೆ, ಪ್ರತಿವಾದಿಯ ಹೆಸರಿಗೆ ಆರೂಮುಕ್ಕಾಲು ಗುಂಟೆ ನಮೂದಿಸಿ ಡಿಕ್ರಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.